ಶ್ರೀ ರಮೇಶ್ ಸಿ. ಜಿಗಜಿಣಗಿ:- ಮಾನ್ಯ ಸದಸ್ಯರು ವಿರಾಜಪೇಟೆಯಲ್ಲಿ ಹೆಚ್ಚಿನ ಕೇಸುಗಳಿವೆ, ಅಲ್ಲ ಒಂದು ಸರ್ವೇಯರ್ ಆಫೀಸ್ ತೆಗೆಯಬೇಕೆಂದು ಕೇಳುತ್ತಿದ್ದಾರೆ. ಆದರೆ ಕೇಳಿದಲ್ಲೆಲ್ಲಾ ತೆಗೆಯುವುದಕ್ಕಾಗುವುದಿಲ್ಲ. ಕಾರ್ಯತತ್ಪರತೆ, ಎಲ್ಲೆಲ್ಲಿ ಕೆಲಸದ ಒತ್ತಡ ಹೆಚ್ಚು ಇದೆ ಅದನ್ನು ನೋಡಿಕೊಂಡು ಅವರ ಸೂಚನೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು:- ನಾನು ಕೇಳಿದ್ದುದು ವಿರಾಜಪೇಟೆಯಲ್ಲಿ ಹಂಗಾಮಿ ಕಛೇರಿ ಮಾಡುತ್ತಿದ್ದಾರೆ ಅದನ್ನು ಪರ್ಮನೆಂಟ್ ಮಾಡಿದರೆ ಸಾಕು. ಹೋಬಳಿಯಲ್ಲಿ ತೆಗೆಯಿರಿ ಎಂದು ನಾನು ಕೇಳಲಿಲ್ಲ. ವಿರಾಜಪೇಟೆ ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲಿ ತೆಗೆದರೆ ಸಾಕು.

ಒಬ್ಬ ಮಾನ್ಯ ಸದಸ್ಯರು:- ಇದು ಕೊಡಗಿಗೆ ಮಾತ್ರ ಸೀಮಿತವಲ್ಲ. ಸರ್ವೇಯರ್ ಹುದ್ದೆಗೆ ಸೀಮಿತ ಅಲ್ಲ. ಬೆಳಗಾಂ ಜಿಲ್ಲೆಯಲ್ಲಿ 156 ವಿಲೇಜ್ ಆಕೌಂಟೆಂಟ್ ಹುದ್ದೆಗಳು ಖಾಲಿ ಇವೆ; ಸರ್ವೇಯರ್ ಹುದ್ದೆಗಳು ಖಾಲಿ ಇವೆ. ಅವನ್ನು ತೀವ್ರವಾಗಿ ತುಂಬಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ:- ಮುಂದಿನ ತಿಂಗಳ 30ರೊಳಗೆ ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಅವನ್ನೆಲ್ಲಾ ತುಂಬುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ಗೋಣಿಕೊಪ್ಪ ಮತ್ತು ಮೈಸೂರು ನಡುವೆ ಮೆಟಡಾರ್, ವ್ಯಾನ್‌ಗಳಲ್ಲಿ ಸಾರ್ವಜನಿಕರ ಪ್ರಯಾಣ.

367 (2447) **ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಣಿಕೊಪ್ಪ ಮತ್ತು ಮೈಸೂರಿನ ನಡುವೆ ಮೆಟಡಾರ್ ವ್ಯಾನ್‌ಗಳಲ್ಲಿ ಸಾರ್ವಜನಿಕರು ಪ್ರಯಾಣ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಿಗೆ ಆದಾಯ ಕಡಿಮೆ ಯಾಗುವುದಿಲ್ಲವೇ?

ಇ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಹೌದು.

ಆ) ಹೌದು.

ಇ) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಟಿಡಿ:93:ಟಿಎಂಎ:93(1)(2) ದಿನಾಂಕ: 09-06-1993ರಲ್ಲಿ ಸರ್ಕಾರವು ಕರ್ನಾಟಕ ರಾಜ್ಯ ರಾಷ್ಟ್ರೀಕೃತ ಮಾರ್ಗದಲ್ಲಿ ಅನಧಿಕೃತನಾಗಿ ಮತ್ತು ಕಳ್ಳಾಟಿಕೆಯಿಂದ ಓಡಾಡುತ್ತಿರುವ ಪ್ರವಾಸೀ ವಾಹನಗಳನ್ನು ಹತೋಟಿಗೆ ತರಲು ರಾಜ್ಯದ ದಕ್ಷಿಣ ವಲಯದ ಜಿಲ್ಲೆಗಳಾದ ಮಂಡ್ಯ, ಬೆಂಗಳೂರು, ಮೈಸೂರು, ತುಮಕೂರು, ಕೋಲಾರ, ಚಿಕ್ಕ -

ಮಗಳೂರು, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಡಗು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮನ್ವಯ ಸಮಿತಿ ಮತ್ತು ಜಿಲ್ಲಾ ಜಾಗೃತ ದಳಗಳನ್ನು, ಪ್ರಾದೇಶಿಕ ಸಾರಿಗೆ ಅಧಿಕಾರಿ: ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ: ಪೋಲೀಸ್ ಸಬ್ ಇನ್ಸ್-ಪೆಕ್ಟರ್ ಹಿರಿಯ ಮೋಟಾರು ವಾಹನ ನಿರೀಕ್ಷಕರು: ಮೋಟಾರು ವಾಹನ ನಿರೀಕ್ಷಕರು ಮತ್ತು ಪೋಲೀಸ್ ಪೇದೆಗಳನ್ನೊಳಗೊಂಡು ರಚಿಸಿದೆ.

ಈ ಜಾಗೃತ ದಳಗಳು ರಾಷ್ಟ್ರೀಕೃತ ಮಾರ್ಗಗಳಲ್ಲಿ ಅನಧಿಕೃತವಾಗಿ ಮತ್ತು ಕಳ್ಳಾಟಿಕೆಯಿಂದ, ಕರ್ನಾಟಕ ರಾಜ್ಯ.ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಿಗೆ ಸಮಾನಾಂತರವಾಗಿ ಓಡಾಡುತ್ತಿರುವ ಪ್ರಯಾ-ಣಿಕ ವಾಹನಗಳನ್ನು ಮತ್ತು ಸಂಸ್ಥೆಗೆ ಆಗುತ್ತಿರುವ ನಷ್ಟವನ್ನು ಕಡಿಮೆ ಮಾಡಲು ಹಾಗೂ ಪ್ರಯಾಣಿ-ಕರಿಗೆ ಉತ್ತಮ ಸೇವೆ ಒದಗಿಸಲು ಶ್ರಮಿಸುತ್ತಿವೆ. ದಿನಾಂಕ: 01-04-1995 ರಿಂದ 31-03-1996ರ ವರೆಗೆ ಮೈಸೂರು ಮತ್ತು ಮಡಿಕೇರಿ ಜಿಲ್ಲೆಗಳಲ್ಲಿ 5897 ಮೆಟಡಾರ್ (ಮ್ಯಾಕ್ಸಿ ಕ್ಯಾಬ್) ವಾಹನಗಳನ್ನು ತಪಾಸಣೆಗೆ ಗುರಿ ಪಡಿಸಿ, 1742 ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ-ಕೊಂಡು ರೂಪಾಯಿ 2,88,680-00 ದಂಡ ವಸೂಲಿ ಮಾಡಲಾಗಿದೆ.

ಶ್ರೀ ಹೆಚ್.ಡಿ. ಬಸವರಾಜು:- ಗೋಣಿಕೊಪ್ಪ ಮತ್ತು ಮೈಸೂರಿನ ನಡುವೆ ಮೆಟಡಾರ್ ವ್ಯಾನ್‌ಗಳಲ್ಲಿ ಸಾರ್ವಜನಿಕರು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಹೌದು ಎಂದು ಹೇಳಿದ್ದಾರೆ. ಇದರಿಂದ ಕರ್ನಾಟಕ ರಾಜ್ಯದ ಸಾರಿಗೆ ಬಸ್ಸುಗಳಿಗೆ ಆದಾಯ ಕಡಿಮೆಯಾಗುವುದಿಲ್ಲವೇ ಎಂದರೆ ಅದಕ್ಕೂ 'ಹೌದು' ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಏನು ಕ್ರಮ ಕೈಗೊಳ್ಳುತ್ತೀರಿ ಅಂದರೆ ಅವರು ಏನು ಹೇಳಿದ್ದಾರೆ, ಒಂದು ಪೋಲೀಸ್ ಪೇದೆಗಳನ್ನು ಒಳಗೊಂಡ ಒಂದು ಜಾಗೃತ ದಳವನ್ನು ರಚನೆ ಮಾಡಿದ್ದೇವೆ. ಪೋಲೀಸ್ ಅಧಿಕಾರಿಗಳು, ಸಾರಿಗೆ ಪ್ರಾಧಿಕಾರದ ಅಧಿಕಾರಿಗಳು ಇದುವರೆಗೆ ತಪಾಸಣೆ ಮಾಡಿ 2,88,880 ರೂಪಾಯಿ ದಂಡ ವಸೂಲಿ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಸೋಜಿಗದ ಪ್ರಶ್ನೆ ಏನೆಂದರೆ ಸಾರಿಗೆ ಸಂಸ್ಥೆಯ ಬಸ್ಸಿನ ಆದಾಯ ಎಷ್ಟು ಕಡಿಮೆಯಾಗಿದೆ ಎಂದು ಇವರು ಲೆಕ್ಕ ಹಾಕಲಿಲ್ಲ. ದಂಡ ವಸೂಲಿ ಬಗ್ಗೆ ಮಾತ್ರ ಹೈಲೈಟ್ ಮಾಡಿದ್ದಾರೆ. ಎಷ್ಟು ಕೋಟಿ ಹಣ ಈ ಒಂದು ಖಾಸಗಿದಾರರು ಖಾಸಗಿ ಬಸ್ಸುಗಳನ್ನು ಅಂದರೆ ಖಾಸಗಿ ಸಾರಿಗೆ ವ್ಯವಸ್ಥೆ; ಮಾಡಿದ್ದರಿಂದ ಸಂಸ್ಥೆಗೆ ಆದಾಯ ನಷ್ಟವಾಯಿತು ಎಂದು ತಿಳಿಸಬೇಕೆಂದು ಕೇಳುತ್ತಿದ್ದೇನೆ. ಎರಡನೆಯದಾಗಿ, ಸರ್ಕಾರ ಇವರ ವಿರುದ್ಧ ಪ್ರಕರಣಗಳನ್ನು ದಾಖಲೆ ಮಾಡಿಕೊಂಡು ದಂಡ ವಸೂಲಿ ಮಾಡಿತೇ ಹೊರತು ಬಸ್ಸುಗಳನ್ನು ಏತಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಿಲ್ಲ? ಮೆಟಡಾರ್ ವ್ಯಾನ್‌ಗಳನ್ನು ಮುಟ್ಟುಗೋಲು ಮಾಡಿಕೊಂಡಿದ್ದರೆ ಅವರಲ್ಲಿ ಭಯ-ಭೀತಿ ಬಂದು ಇವತ್ತು ಅವುಗಳನ್ನು ನಿಲ್ಲಿಸುತ್ತಿದ್ದರು. ಬರೀ ದಂಡ ವಸೂಲಿ ಮಾಡುತ್ತಿದ್ದೀರಿ. ಅದನ್ನು ಏತಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಿಲ್ಲ? ಇವೆರಡು ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಡ ಬೇಕೆಂದು ಕೇಳುತ್ತಿದ್ದೇನೆ. ಕೊನೆಯದಾಗಿ ಒಂದು ಪ್ರಶ್ನೆ ಏನೆಂದರೆ, ಜನದಟ್ಟಣೆ ಜಾಸ್ತಿಯಾಗಿದೆ

ಎಂದು ಅವರಿಗೆ ಅನ್ನಿಸಿತು ಅಂದರೆ ಮೆಟಾಡಾರ್ ಓಡಾಡಿಸಿ ಅವರು ಬೇಕಾದಷ್ಟು ಆದಾಯ ಮಾಡಿಕೊಳ್ಳುತ್ತಿದ್ದಾರೆಂದರೆ ಅಲ್ಲಿ ಹೆಚ್ಚಿನ ಬಸ್ಸುಗಳನ್ನು ಓಡಿಸುವುದರ ಬಗ್ಗೆ ಸರ್ಕಾರ ಪರಿಶೀಲಿಸುತ್ತ-ದೆಯೇ ಈ ಮೂರು ಪ್ರಶ್ನೆಗಳಿಗೆ ಉತ್ತರ ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಗೋಣಿಕೊಪ್ಪ ಮತ್ತು ಮೈಸೂರು ನಡುವೆ ಮೆಟಾಡಾರ್ ವ್ಯಾನ್‌ಗಳು ಓಡಾಡುತ್ತಿರುವುದು ಸತ್ಯಸಂಗತಿ. ಇದರಿಂದ ನಿರ್ದಿಷ್ಟವಾಗಿ ಸಾರಿಗೆ ಸಂಸ್ಥೆಗಳಿಗೆ ಎಷ್ಟು ಆದಾಯ ಹಾನಿಯಾಗಿದೆ ಎಂದು ಹೇಳುವುದು ಕಷ್ಟದ ಕೆಲಸ, ಸಾಧ್ಯವಿಲ್ಲವೆಂದು ಹೇಳಬಹುದು. ಬೇಕಾದರೆ ಇದನ್ನೆಲ್ಲಾ ಪ್ರತ್ಯೇಕವಾಗಿ ಕ್ಯಾಲ್ಯುಕುಲೇಟ್ ಮಾಡಬೇಕಾಗುತ್ತದೆ. ಎಷ್ಟು ಸಾವಿರ ಬಸ್ಸು-ಗಳು, ಎಷ್ಟು ಟ್ರಿಪ್‌ಗಳು ಒಂದು ದಿನದಲ್ಲಿ ಓಡಾಡುತ್ತವೆ ಅದನ್ನೆಲ್ಲಾ ಲೆಕ್ಕ ಹಾಕಬೇಕಾಗುತ್ತದೆ. ಪ್ರಶ್ನೆ ಆ ರೀತಿ ಇದ್ದುದರಿಂದ ನಾನು ಹೇಳಿದೆ. ಅದನ್ನು ನಾನು ಕಳುಹಿಸಿಕೊಡುತ್ತೇನೆ ಗೌರವಾನ್ವಿತ ಸದಸ್ಯ-ರಿಗೆ. ಬರೀ ದಂಡಗಳನ್ನು ಹಾಕುವುದರಿಂದ ಮಾತ್ರ ನೀವು ಸಮಾಧಾನಪಟ್ಟುಕೊಳ್ಳುತ್ತಾ ಇದ್ದೀರಿ, ಬಸ್ಸು ಗಳನ್ನು ಅಥವಾ ಮ್ಯಾಕ್ಸಿಕ್ಯಾಬ್‌ಗಳನ್ನು ಮುಟ್ಟುಗೋಲು ಏತಕ್ಕೆ ಹಾಕಿಕೊಳ್ಳಬಾರದು ಅಂದರೆ ಅದನ್ನು ಏತಕ್ಕೆ ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಕಾನೂನಿನಲ್ಲಿ ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ನಮಗೆ ಅವಕಾಶ ಇಲ್ಲ. ಆದರೆ ಒಂದಂತೂ ಮಾನ್ಯ ಬಸವ ರಾಜ್ ಅವರು ಹೇಳಿರುವುದು ನಿಜವಾದ ಅಂಶ. ಈ ಮ್ಯಾಕ್ಸಿಕ್ಯಾಬ್‌ಗಳೂ ಅಷ್ಟೇನೇ ಪ್ರೈವೇಟ್ ಕ್ಯಾರೇಜ್‌ಗಳೂ ಅಷ್ಟೇನೇ. ಪರ್ಮಿಟ್ ಇರುವ ಕಡೆ ಓಡಾಡದೆ ಬೇರೆ ಕಡೆ ಓಡಾಡುತ್ತಾರೆ, ಓವರ್-ಲೋಡಿಂಗ್ ಮಾಡುತ್ತಾರೆ, ಓವರ್‌ಸ್ಪೀಡ್ ಮಾಡುತ್ತಾರೆ. ಇವೆಲ್ಲಾ ಸತ್ಯವಾದ ಸಂಗತಿ. ಇದರಿಂದಾಗಿ ಸಾರಿಗೆ ಸಂಸ್ಥೆಗೆ ಇಡೀ ರಾಜ್ಯದಲ್ಲಿ ಇದೊಂದೇ ರಸ್ತೆಯಲ್ಲ ಇಡೀ ರಾಜ್ಯದಲ್ಲಿ ಸ್ವಲ್ಪಮಟ್ಟಿಗೆ ನಷ್ಟ ಆಗುತ್ತಾ ಇರುವುದು ನಿಜವಾದ ಸಂಗತಿಯೇ. ಆದರೆ ವಸ್ತುಸ್ಥಿತಿಯಲ್ಲಿ ರಾಜ್ಯದಲ್ಲಿ 11,000 ಮ್ಯಾಕ್ಸಿ ಕ್ಯಾಬ್‌ಗಳು ಈಗಾಗಲೇ ಇವೆ. ಒಂದು ಮ್ಯಾಕ್ಸಿಕ್ಯಾಬ್‌ಗೆ ಇಬ್ಬರು ಅಥವಾ ಮೂರು ಜನರಿಗೆ ಕೆಲಸ ಸಿಗುತ್ತದೆ ಅಂದರೂ 33,000 ಜನ ಕೆಲಸಕ್ಕೋಸ್ಕರ ಇದರ ಮೇಲೆ ಅವಲಂಬಿಸಿಕೊಂಡಿದ್ದಾರೆ. ಒಂದು ಕಾಲದಲ್ಲಿ ಈ ಮ್ಯಾಕ್ಸಿಕ್ಯಾಬ್‌ಗಳ ಪರ್ಮಿಟ್‌ಗಳನ್ನು ನಾನೇ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿ ಈ ಸರ್ಕಾರದಲ್ಲಿ ನಿಲ್ಲಿಸಿದ್ದುದು ತಮಗೆ ಗೊತ್ತಿರತಕ್ಕಂಥ ವಿಚಾರವೇ. ಆದರೆ ಇವತ್ತು ಅನೇಕ ಜನ ನಿರುದ್ಯೋಗಿ ಯುವಕರಿದ್ದಾರೆ. ಕೆ.ಎಸ್.ಎಫ್.ಸಿ. ಯಿಂದ ನ್ಯಾಷನಲೈಸ್ಡ್ ಬ್ಯಾಂಕಿನಿಂದ ಒಂದೊಂದು ಮೆಟಾಡಾರ್ ವ್ಯಾನ್‌ಗೆ 5 ಲಕ್ಷ ರೂಪಾಯಿ 6 ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ಅವರು ಉದ್ಯೋಗ ಮಾಡುತ್ತಿದ್ದಾರೆ. ಆದರಿಂದಾಗಿ ನಾವು ಅವುಗಳನ್ನು ಸಂಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳುವುದು ಕಷ್ಟದ ಕೆಲಸವಾಗುತ್ತದೆ. ಆದರೆ ಒಂದು ಒಪ್ಪುತ್ತೇನೆ. ಒಂದು ಕಮಿಟಿಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇದನ್ನು ಯಾವರೀತಿ ರೆಗ್ಯುಲೇಟ್ ಮಾಡಬೇಕು ಎಂಬುದಕ್ಕೆ ಒಂದು ಸ್ಕ್ಯಾಡನ್ನು ಮಾಡಿದ್ದೇವೆ. ಅದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಟ್ಟು ಇವರೇನು ಓವರ್‌ಲೋಡ್ ಮಾಡುತ್ತಿದ್ದಾರೆ ಅಥವಾ ಪರ್ಮಿಟ್ ಇಲ್ಲದೆ ಓಡಿಸುತ್ತಿದ್ದಾರೆ ಅಥವಾ ಕ್ಲಾಂಡಸ್ಟೈನಾಗಿ ಅಪರೇಟ್ ಮಾಡುತ್ತಾರೆ ಅದನ್ನು ರೆಗ್ಯುಲೇಟ್ ಮಾಡಲಿಕ್ಕೆ ನಾನು ಪ್ರಾಮಾಣಿಕವಾದ ಪ್ರಯತ್ನವನ್ನು

ಮಾಡುತ್ತೇನೆ ಎಂದು ಹೇಳಿ ಈ ಗೋಣಿಕೊಪ್ಪ ಮೈಸೂರು ಮಧ್ಯೆ ಟ್ರಾಫಿಕ್ ಹೆಚ್ಚಿಗೆ ಇದೆ ಎಂದು ಕಂಡುಬಂದಿರುವುದರಿಂದ ಇಲ್ಲೂ ಹೆಚ್ಚಿಗೆ ಸಾರಿಗೆ ಸಂಸ್ಥೆ ಬಸ್ಸುಗಳನ್ನು ಓಡಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್:- ಪರವಾನಗಿ ಇಲ್ಲದೇ ಓಡಾಡುತ್ತಿರುವ ಮೆಟಡಾರ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ನಾನು ಹೇಳಿದೆ. ತಾವು ಹೇಳಿದಿರಿ ಮೂರು ಜನಕ್ಕೆ ಅದರಿಂದ ಕೆಲಸ ಸಿಗುತ್ತದೆ, ಅವರು ಐದಾರು ಲಕ್ಷ ರೂಪಾಯಿ ಅದನ್ನು ಕೊಳ್ಳಲಿಕ್ಕೆ ಸಾಲ ಮಾಡಿರುತ್ತಾರೆ ಎಂದು. ಅದರ ಬಗ್ಗೆ ನಾನು ಕೇಳಲಿಲ್ಲ. ಪರವಾನಗಿ ಇಲ್ಲದೆ ಓಡಿಸುತ್ತಿದ್ದಾರೆ. ತಾವೇ ಹೇಳಿದ್ದೀರಿ. ಅನಧಿಕೃತವಾಗಿ ಓಡುತ್ತಾ ಇರುವಂಥದ್ದು ಕಳ್ಳಾಟಿಕೆಯಿಂದ. ಇದನ್ನು ಸ್ಪಷ್ಟವಾಗಿ ತಾವು ತಿಳಿಸಿದ್ದೀರಿ. ಕಳ್ಳಾಟಿಕೆಯಿಂದ ಓಡಾಡುವುದಕ್ಕೆ ನಾವು ಏತಕ್ಕೆ ಎನ್‌ಕರೇಜ್ ಮಾಡಬೇಕು? ಇವತ್ತು ಕಳ್ಳತನ ನಡೆಯುತ್ತದೆಂದರೆ ಸಾವಿರಾರು ಜನ ಅದರಲ್ಲಿದ್ದಾರೆ ಎಂದು ಪ್ರೋತ್ಸಾಹ ಕೊಡುವುದಕ್ಕಾಗುತ್ತದೆಯೇ? ಆದ್ದರಿಂದ ಈ ಕಳ್ಳಾಟಿಕೆಯಿಂದ ಓಡಾಡುವಂಥ ಯಾವುದು ಮೆಟಡಾರ್ ಇದೆ ಅದನ್ನು ತಾವು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ತಾವು ಪರವಾನಗಿ ಕೊಟ್ಟಿದ್ದರೆ ಬೇಡ. ದಯವಿಟ್ಟು ಇದರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಉಪಾಧ್ಯಕ್ಷರೆ, ಪರವಾನಗಿ ಇಲ್ಲದೇ ಇರುವಂಥ ಎಲ್ಲಾ ವಾಹನಗಳ ಮೇಲೂ ಸಹಿತ ಅಕ್ರಮವಾಗಿ ನಡೆಸತಕ್ಕ ಎಲ್ಲಾ ಚಾಲನೆಯನ್ನು ಕೂಡ ನಿಲ್ಲಿಸತಕ್ಕಂಥದ್ದು ಸರ್ಕಾರದ ಕರ್ತವ್ಯವಾಗುತ್ತದೆ. ಆ ಕೆಲಸವನ್ನು ನಾನು ಮಾಡುತ್ತೇನೆ.

ವಿಷಯ:- ಗೋಕಾಕ್ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಬಸ್ ಸಂಚಾರ ಇಲ್ಲದೇ ಇರುವುದು.

369 (2170) ಶ್ರೀ ಚಂದ್ರಶೇಖರ ನಾಯಕ (ಗೋಕಾಕ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ್ ತಾಲ್ಲೂಕಿನ ನೆಲಗಂಟಿ, ಮಲಾಮರಡಿ, ಗುದನಟ್ಟಿ, ಕಡಬಗಟ್ಟಿ ಗಡ ಮತ್ತು ಜಮದಾಳ ಗ್ರಾಮಕ್ಕೆ ಬ್ರಿಟೀಷರ ಕಾಲದಿಂದಲೂ ಬಸ್ ಸಂಚಾರವಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಬಸ್ ಸಂಚಾರ ಕಲ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು